# ನನಸಾದ ಕನಸು

■ ಎಂ.ಎಸ್‌. ಉಷಾ ಪ್ರಕಾಶ್
ಕಲೆ: ಸಂತೋಷ್ ಸಸಿಹಿತ್ಲು




ಒಂದು ಊರಿನಲ್ಲಿ ಚಿನ್ನಮ್ಮ ಎಂಬುವವಳಿದ್ದಳು. ಮುತ್ತಜ್ಜಿಯ ಆಸೆ ತೀರಿಸಲು ಸೋದರ ಮಾವನಿಗೆ ಕೊಟ್ಟು ಬಾಲ್ಯ ವಿವಾಹ ಮಾಡಿದರು. ಏನೂ ಅರಿಯದ ವಯಸ್ಸು ಚಿನ್ನಮ್ಮನಿಗೆ. ಜೀವನ ಎಂದರೆ ಏನೆಂದು ತಿಳಿಯುವ ಮುನ್ನ ಗಂಡನನ್ನು ಕಳೆದುಕೊಂಡಳು. ಆಟ ಆಡುವ ವಯಸ್ಸಾದ್ದರಿಂದ ಗಂಡನನ್ನು ಕಳೆದುಕೊಂಡ ನೋವು ಅವಳನ್ನು ಬಾಧಿಸಲಿಲ್ಲ. ನಂತರ ಅವಳು ತಾಯಿ ಮನೆಯಲ್ಲೇ ಬೆಳೆದಳು. ಹತ್ತಿರದಲ್ಲೇ ಇದ್ದ ಶಾಲೆಯಲ್ಲಿ ಆಯಾ ಕೆಲಸಕ್ಕೆ ಸೇರಿದಳು. ಎಲ್ಲರೂ ಇವಳನ್ನು ಚಿನ್ನಮ್ಮ ಎಂದೇ ಕರೆಯುತ್ತಿದ್ದರು. ಶಾಲೆಯಲ್ಲಿ ಏನೇ ಕೆಲಸ ಇದ್ದರೂ ನಗುತ್ತಾ ಹೇಳಿದ ಕೆಲಸವನ್ನು ಬೇಗ ಮಾಡುತ್ತಿದ್ದಳು. ಆ ಶಾಲೆಯಲ್ಲಿ ಎಲ್ಲರ ಪ್ರೀತಿ ಗಳಿಸಿದ್ದಳು. ಮಕ್ಕಳೊಂದಿಗೆ ಅಕ್ಷರ ಕಲಿತು ಓದು ಬರೆಯುವುದನ್ನು ತಿಳಿದುಕೊಂಡಳು. ಅಕ್ಷರ ಜ್ಞಾನದಿಂದ ವಿವೇಚನೆಯೂ ಬೆಳೆಯಿತು. ತನ್ನ ಸುತ್ತಮುತ್ತ ಎಲ್ಲಾದರೂ ಬಾಲ್ಯ ವಿವಾಹ ಮಾಡುತ್ತಿದ್ದಾರೆ ಎಂದು ತಿಳಿದರೆ ಆ ಪೋಷಕರಿಗೆ ತನ್ನದೆ ಆದ ಉದಾಹರಣೆಯನ್ನು ನೀಡಿ ಬಾಲ್ಯ ವಿವಾಹವನ್ನು ತಪ್ಪಿಸುತ್ತಿದ್ದಳು. ಮೊದಲು ಆಕೆ ಜನರ ವಿರೋಧವನ್ನು ಎದುರಿಸಿದಳು. ನಂತರ ಚಿನ್ನಮ್ಮನ ಮಾತು ಸರಿ ಎಂದು ತಿಳಿದು ಸುಮ್ಮನಾಗುತ್ತಿದ್ದರು. ಶಾಲೆಯಲ್ಲಿ ಎಲ್ಲ ಮಕ್ಕಳನ್ನು ತನ್ನ ಮಕ್ಕಳೆ ಎನ್ನುವ ಭಾವದಲ್ಲಿ ಸಲಹುತಿದ್ದಳು. ಪ್ರೌಢಶಾಲೆ ಮುಗಿದ ನಂತರ ಅನೇಕ ಹೆಣ್ಣು ಮಕ್ಕಳಿಗೆ ಶಾಲೆಯನ್ನು ಬಿಡಿಸುತಿದ್ದರು. ಓದಲು ಪರ ಊರಿಗೆ ಕಳಿಸುವುದಕ್ಕೆ ಅನೇಕ ಪೋಷಕರು ಒಪ್ಪುತ್ತಿರಲಿಲ್ಲ. ಇದನ್ನು ತಿಳಿದ ಚಿನ್ನಮ್ಮನಿಗೆ ಬೇಜಾರಾಯ್ತು. ಆಕೆಗೆ ಒಂದು ಯೋಚನೆ ಹೊಳೆಯಿತು. ಒಮ್ಮೆ ಶಾಲೆಯ ಅಧಿಕಾರಿಗಳೊಂದಿಗೆ ಮಾತನಾಡಿ ಈ ಊರಿನಲ್ಲಿ ಕಾಲೇಜು ಇಲ್ಲದ ಕಾರಣ ಅನೇಕರು ಮುಂದಿನ ಅಧ್ಯಯನಕ್ಕೆ ವಿದಾಯ ಹೇಳುತ್ತಿದ್ದಾರೆ. ನಮ್ಮ ಶಾಲೆಯ ಮಕ್ಕಳಿಗೆ ತುಂಬಾ ಚೆನ್ನಾಗಿ ಓದಬೇಕೆಂಬ ಆಸೆ ಇದೆ. ಅದಕ್ಕೆ ಈ ಊರಿನಲ್ಲಿ ಕಾಲೇಜು ತೆರೆಯಬೇಕೆಂದು ವಿನಂತಿಸಿದಳು. ಆಗ ಅಧಿಕಾರಿಗಳು ನಮಗೆ ಸ್ಥಳದ ಅಭಾವ ಇದೆ ಎಂದಾಗ ಚಿನ್ನಮ್ಮ ಸುಮ್ಮನಾಗಲಿಲ್ಲ. 'ಬುದ್ಧಿ, ಒಂದು ನಿಮಿಷ' ಎಂದು ಒಂದು ಪತ್ರವನ್ನು ನೀಡಿದಳು. ನನಗೆ ಸೇರಿದ ಆರು ಎಕರೆ ಭೂಮಿ ಇದೆ. ಈ ಭೂಮಿಯನ್ನು ಶಾಲೆಗೆ ಬರೆದು ಕೊಡುತ್ತೇನೆ. ಅಲ್ಲೇ ಕಾಲೇಜು ಕಟ್ಟಡ ನಿರ್ಮಿಸಿ ಮಕ್ಕಳ ಓದಿಗೆ ಸಹಾಯ ಮಾಡಿ ಎಂದು ಕೇಳಿಕೊಂಡಳು.

ಅಧಿಕಾರಿಗಳು ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ನಂತರ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಅವಳ ಮೇಲೆ ಇನ್ನೂ ಗೌರವ ಹೆಚ್ಚಾಯಿತು. ಮಕ್ಕಳು ಓದುವ ಕನಸು ಕಾಣತೊಡಗಿದರು. ಕಾನೂನಿನ ಪ್ರಕಾರ ಅಧಿಕಾರಿಗಳು ಕಾಲೇಜಿಗೆ ಮಂಜೂರಾತಿ ನೀಡಿದರು. ಸಾರ್ವಜನಿಕರ ಅಭಿಪ್ರಾಯದಂತೆ ಚಿನ್ನಮ್ಮ ಕಾಲೇಜು ಹಾಗೂ ಚಿನ್ನಮ್ಮ ಹಾಸ್ಟೆಲ್ ಎಂದು ಹೆಸರಿಟ್ಟರು. ಚಿನ್ನಮ್ಮಳಿಗೆ ಮಕ್ಕಳನ್ನು ಉದ್ದೇಶಿಸಿ ಮಾತನಾಡಿ ಎಂದಾಗ 'ನೋಡಿ ಮಕ್ಕಳೇ ತಿಳಿದಷ್ಟು ನನ್ನ ಅನುಭವದ ಮೇಲೆ ಮಾತನಾಡುತ್ತೇನೆ. ನನ್ನ ಜೀವನದ ದುರಂತ ಕಥೆಯನ್ನು ನೀವೆಲ್ಲ ತಿಳಿದಿದ್ದೀರಿ. ಆ ರೀತಿ ಬೇರೆ ಯಾರಿಗೂ ಆಗಬಾರದು. ಮುಂದಿನ ವಿದ್ಯಾಭ್ಯಾಸವನ್ನು ಇದೇ ಕಾಲೇಜಿನಲ್ಲಿ ಮುಂದುವರೆಸಿ. ಅಗತ್ಯವಿದ್ದವರು ಹಾಸ್ಟೆಲ್ ಉಪಯೋಗವನ್ನು ಪಡೆಯಿರಿ. ಶಾಲೆ, ಮನೆ ಹಾಗೂ ದೇಶದ ಏಳಿಗೆಗೆ ಶ್ರಮಿಸಿ. ನಿಮ್ಮ ಜವಾಬ್ದಾರಿ ಹಾಗೂ ಕರ್ತವ್ಯ ಅರಿತು ಬಾಳಿ. ತಿಳಿದಷ್ಟನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ' ಎಂದಳು. ಸಭಿಕರು ಜೋರಾಗಿ ಚಪ್ಪಾಳೆಯ ಸದ್ದು ಮಾಡಿದರು. ಚಿನ್ನಮ್ಮ ತನ್ನ ಕನಸು ನನಸು ಮಾಡಿದ ಶಿವನಿಗೆ ಕೈ ಮುಗಿದಳು. ■